# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1264
ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 17.12.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದ KSRTC, NWKRTC, KKRTC ಹಾಗೂ BMTC ನಿಗಮಗಳು ಕಳೆದ 3 ವರ್ಷಗಳಲ್ಲಿ ಎಷ್ಟು ಆರ್ಥಿಕ ನಷ್ಟವನ್ನು ಅನುಭವಿಸಿವೆ; ನಷ್ಟಕ್ಕೆ ಕಾರಣವಾದ ಮುಖ್ಯ ಅಂಶಗಳು ಯಾವುವು; (ಕಳೆದ ಮೂರು ವರ್ಷದ ಪ್ರತಿ ನಿಗಮದ ವರ್ಷವಾರು ಆದಾಯ ಖರ್ಚು ನಷ್ಟದ ವಿವರಗಳನ್ನು ಒದಗಿಸುವುದು)</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಕಳೆದ 05 ವರ್ಷಗಳಲ್ಲಿ ಅನುಭವಿಸಿದ ಲಾಭ/ನಷ್ಟ ಮತ್ತು ವೆಚ್ಚದ ವಿವರ (ಸಬ್ಸಿಡಿ ಹೊರತುಪಡಿಸಿ) ಕೆಳಕಂಡಂತಿದೆ:<br>
(ರೂ.ಕೋಟಿಗಳಲ್ಲಿ)
<table>
<tr><th colspan="4">ಕ.ರಾ.ರ.ಸಾ.ನಿಗಮ</th></tr>
<tr><th>ವರ್ಷ</th><th>ಆದಾಯ</th><th>ವೆಚ್ಚ</th><th>ನಷ್ಟ</th></tr>
<tr><td>2020-21</td><td>2271.91</td><td>2853.06</td><td>581.15</td></tr>
<tr><td>2021-22</td><td>2859.09</td><td>3282.40</td><td>423.31</td></tr>
<tr><td>2022-23</td><td>4573.68</td><td>4616.57</td><td>597.89</td></tr>
<tr><td>2023-24</td><td>4544.41</td><td>4839.84</td><td>295.43</td></tr>
<tr><td>2024-25</td><td>5406.39</td><td>5488.22</td><td>81.83</td></tr>
</table>
<table>
<tr><th colspan="4">ಬೆಂ.ಮ.ಸಾ.ಸಂಸ್ಥೆ</th></tr>
<tr><th>ವರ್ಷ</th><th>ಆದಾಯ</th><th>ವೆಚ್ಚ</th><th>ನಷ್ಟ</th></tr>
<tr><td>2020-21</td><td>1853.06</td><td>2017.26</td><td>164.20</td></tr>
<tr><td>2021-22</td><td>2115.12</td><td>2293.37</td><td>178.25</td></tr>
<tr><td>2022-23</td><td>2937.66</td><td>3015.04</td><td>997.38</td></tr>
<tr><td>2023-24</td><td>2613.80</td><td>3189.25</td><td>575.45</td></tr>
<tr><td>2024-25</td><td>2768.27</td><td>3438.75</td><td>670.48</td></tr>
</table>
<table>
<tr><th colspan="4">ವಾ.ಕ.ರ.ಸಾ.ಸಂಸ್ಥೆ</th></tr>
<tr><th>ವರ್ಷ</th><th>ಆದಾಯ</th><th>ವೆಚ್ಚ</th><th>ನಷ್ಟ</th></tr>
<tr><td>2020-21</td><td>1282.47</td><td>1671.55</td><td>389.08</td></tr>
<tr><td>2021-22</td><td>1471.61</td><td>1934.19</td><td>462.58</td></tr>
<tr><td>2022-223</td><td>2845.92</td><td>2872.07</td><td>746.15</td></tr>
<tr><td>2023-24</td><td>2372.81</td><td>2695.29</td><td>322.48</td></tr>
<tr><td>2024-25</td><td>2805.66</td><td>2836.77</td><td>31.11</td></tr>
</table>
<table>
<tr><th colspan="4">ಕ.ಕ.ರ.ಸಾ.ನಿಗಮ</th></tr>
<tr><th>ವರ್ಷ</th><th>ಆದಾಯ</th><th>ವೆಚ್ಚ</th><th>ನಷ್ಟ</th></tr>
<tr><td>2020-21</td><td>1281.42</td><td>1467.87</td><td>186.45</td></tr>
<tr><td>2021-22</td><td>1467.90</td><td>1693.72</td><td>225.82</td></tr>
<tr><td>2022-23</td><td>2239.98</td><td>2354.97</td><td>319.99</td></tr>
<tr><td>2023-24</td><td>2291.85</td><td>2452.97</td><td>161.12</td></tr>
<tr><td>2024-25</td><td>2772.71</td><td>2832.11</td><td>59.40</td></tr>
</table>
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಮೇ-2023ನೇವರೆಗೆ ಒಟ್ಟು ರೂ.4099.38 ಕೋಟಿಗಳ ಹೊಣೆಗಾರಿಕೆ ಬಾಕಿ ಇದ್ದುದ್ದರಿಂದ (ಸಾಲದ ಬಾಕಿ ಹೊಣೆಗಾರಿಕೆ ಒಳಗೊಂಡಂತೆ), ಸದರಿ ಬಾಕಿಯು ನಿಗಮಗಳ ತೀವ್ರ ಆರ್ಥಿಕ ಹಿನ್ನಡೆಗೆ ಕಾರಣವಾಗಿತ್ತು. ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ಮತ್ತು ಸರಬರಾಜುದಾರರ/ ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು.<br><br>ಮೇ 2023 ರವರೆಗೆ ನಿಗಮವಾರು ಬಾಕಿಯಿದ್ದ ಹೊಣೆಗಾರಿಕೆಯ ವಿವರ ಕೆಳಕಂಡಂತಿದೆ:-<br><br>**(ರೂ. ಕೋಟಿಗಳಲ್ಲಿ)**<br>ನಿಗಮ/ ಸಂಸ್ಥೆ — **ಬಾಕಿ ಹೊಣೆಗಾರಿಕೆ ಮೊತ್ತ**<br>ಕ.ರಾ.ರ.ಸಾ.ನಿಗಮ — 1211.18<br>ಬೆಂ.ಮ.ಸಾ.ಸಂಸ್ಥೆ — 1383.86<br>ವಾ.ಕ.ರ.ಸಾ.ಸಂಸ್ಥೆ — 1253.01<br>ಕ.ಕ.ರ.ಸಾ.ನಿಗಮ — 251.33<br>**ಒಟ್ಟು** — **4099.38**<br><br>ಮೇಲ್ಕಂಡಂತೆ ವರ್ಷವಾರು ಬಾಕಿ ವಿವರಗಳನ್ನು **ಅನುಬಂಧ-'ಅ'**ರಲ್ಲಿ ಹಾಗೂ ನಾಲ್ಕು ಸಾರಿಗೆ ಸಂಸ್ಥೆಗಳು ಆರ್ಥಿಕ ನಷ್ಟದಲ್ಲಿರಲು ಕಾರಣಗಳನ್ನು **ಅನುಬಂಧ-'ಆ'**ರಲ್ಲಿ ನೀಡಲಾಗಿದೆ. |
| ಆ. | ಆರ್ಥಿಕ ನಷ್ಟವನ್ನು ಉಲ್ಲೇಖಿಸಿ ರಾಜ್ಯದ ಅನೇಕ ಗ್ರಾಮೀಣ ಹಾಗೂ ಉಪನಗರ ಮಾರ್ಗಗಳಲ್ಲಿ ಬಸ್ ಸಂಚರಿಸುವುದನ್ನು ಕಡಿತಗೊಳಿಸಿರುವುದು ಸಾರ್ವಜನಿಕರಿಗೆ ದೊಡ್ಡ ತೊಂದರೆಯಾಗಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಎರಡು ವರ್ಷದಲ್ಲಿ ಎಷ್ಟು ಮಾರ್ಗಗಳಲ್ಲಿ ಬಸ್ ಸಂಚಾರ ಕಡಿತಗೊಳಿಸಲಾಗಿದೆ; ಸಾರ್ವಜನಿಕರಿಗೆ ಮಾಡಿರುವ ಪರ್ಯಾಯ ವ್ಯವಸ್ಥೆ ಏನು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಆರ್ಥಿಕ ನಷ್ಟವನ್ನು ಉಲ್ಲೇಖಿಸಿ ರಾಜ್ಯದ ಅನೇಕ ಗ್ರಾಮೀಣ ಹಾಗೂ ಉಪನಗರ ಮಾರ್ಗಗಳಲ್ಲಿ ಬಸ್ ಸಂಚರಿಸುವುದನ್ನು ಕಡಿತಗೊಳಿಸಲಾಗಿರುವುದಿಲ್ಲ.<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:-**<br><br>2022-23ರ ಅಂತ್ಯಕ್ಕೆ 7426 ಅನುಸೂಚಿಗಳಿಂದ 45002 ಟ್ರಿಪ್‌ಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು, 2023-24ರ ಅಂತ್ಯಕ್ಕೆ 7811 ಅನುಸೂಚಿಗಳಿಂದ 48455 ಟ್ರಿಪ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಆದೇ ರೀತಿ, 2024-25ರ ಅಂತ್ಯಕ್ಕೆ 8060 ಅನುಸೂಚಿಗಳಿಂದ 50692 ಟ್ರಿಪ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಪ್ರಸ್ತುತ, (ಅಕ್ಟೋಬರ್-2025ರ ಅಂತ್ಯಕ್ಕೆ) 8252 ಅನುಸೂಚಿಗಳಿಂದ 52317 ಟ್ರಿಪ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಅಂದರೆ ಕಳೆದ 2 ವರ್ಷಗಳಲ್ಲಿ ನಿಗಮದಲ್ಲಿ 822 ಅನುಸೂಚಿಗಳನ್ನು ಹಾಗೂ 7315 ಟ್ರಿಪ್‌ಗಳನ್ನು ಹೆಚ್ಚುವರಿ ಕಾರ್ಯಾಚರಣೆ ಮಾಡಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

2024-25 ಮತ್ತು 2025-26ನೇ ಸಾಲಿನ ಗ್ರಾಮಾಂತರ ಪ್ರದೇಶಗಳ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಗ್ರಾಮಾಂತರ ಸಾರಿಗೆ, ವೇಗದೂತ ಸಾರಿಗೆ, ನಗರ ಹಾಗೂ ಉಪನಗರ ಸಾರಿಗೆ ಸೇವೆಗಳ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ:-

| ಸಾರಿಗೆ ಸೇವೆ | | 2023-24 | 2024-25 | 2025-26 (31.10.2025 ರವರಿಗೆ) | ವ್ಯತ್ಯಾಸ |
|---|---|---|---|---|---|
| ಸಾಮಾನ್ಯ | ಅನುಸೂಚಿ | 2793 | 2836 | 2917 | +124 |
| | ಸುತ್ತುವಳಿ | 26845 | 27799 | 28850 | +2005 |
| ವೇಗದೂತ | ಅನುಸೂಚಿ | 3766 | 4031 | 4146 | +380 |
| | ಸುತ್ತುವಳಿ | 12939 | 14268 | 14671 | +1732 |
| ನಗರ | ಅನುಸೂಚಿ | 405 | 414 | 405 | 0 |
| | ಸುತ್ತುವಳಿ | 5797 | 5952 | 6070 | +273 |
| ಉಪ ನಗರ | ಅನುಸೂಚಿ | 99 | 113 | 115 | +16 |
| | ಸುತ್ತುವಳಿ | 1532 | 1678 | 1718 | +186 |
| ಒಟ್ಟು | ಅನುಸೂಚಿ | 7063 | 7394 | 7583 | +520 |
| | ಸುತ್ತುವಳಿ | 47113 | 49697 | 51309 | +4196 |

2023-24ರ ಅಂತ್ಯಕ್ಕೆ ಹೋಲಿಸಿದಾಗ ಪ್ರಸ್ತುತ ಸಾಮಾನ್ಯ – 124, ವೇಗದೂತ –380 ಹಾಗೂ ಉಪನಗರ–16, ಒಟ್ಟು 520 ಅನುಸೂಚಿಗಳನ್ನು ಹೆಚ್ಚಿಸಲಾಗಿದೆ.

2023-24ರ ಅಂತ್ಯಕ್ಕೆ ಹೋಲಿಸಿದಾಗ ಪ್ರಸ್ತುತ ಸಾಮಾನ್ಯ – 2005, ವೇಗದೂತ –1732, ನಗರ-273 ಹಾಗೂ ಉಪನಗರ –186, ಒಟ್ಟು 4196 ಸುತ್ತುವಳಿಗಳನ್ನು ಹೆಚ್ಚಿಸಲಾಗಿದೆ.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**

ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25.0 ಕಿ.ಮೀ.ವರೆಗೆ ಕಾರ್ಯಾಚರಣೆ ವ್ಯಾಪ್ತಿಯನ್ನು ಹೊಂದಿದ್ದು, ಬೆಂಗಳೂರು ನಗರ ಹಾಗೂ ಹೊರ ವಲಯದಲ್ಲಿ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುತ್ತಿದೆ.

2024-25ನೇ ಸಾಲಿನಲ್ಲಿ ಒಟ್ಟು 272 ಅನುಸೂಚಿ/ ಬಸ್ಸುಗಳನ್ನು ಹಾಗೂ 2025-26 ನೇ ಸಾಲಿನಲ್ಲಿ ಒಟ್ಟು 397 ಅನುಸೂಚಿಗಳನ್ನು ಹೆಚ್ಚಿಸಿ, ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಅಲ್ಲದೇ ಸಂಸ್ಥೆಯಲ್ಲಿ ಶಕ್ತಿ ಯೋಜನೆ ಜಾರಿಗೆ ಮೊದಲು ಸಂಸ್ಥೆಯಲ್ಲಿ 5,555 ಅನುಸೂಚಿಗಳಿಂದ 56,646 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು, ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ 6,274 ಅನುಸೂಚಿಗಳಿಂದ 65,934 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಪ್ರತಿದಿನ 719 ಅನುಸೂಚಿ ಹಾಗೂ 9,288 ಸುತ್ತುವಳಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**<br>ಸಂಸ್ಥೆಯಿಂದ ಗ್ರಾಮಾಂತರ ಮತ್ತು ಅರೇ ನಗರ ಪ್ರದೇಶಗಳಲ್ಲಿ ಬಸ್‌ಗಳ ಪ್ರಮಾಣ ಹೆಚ್ಚಿಗೆ ಮಾಡಲು 2024-25ನೇ ಸಾಲಿನಲ್ಲಿ 433 ಹೊಸ ಗ್ರಾಮಾಂತರ ಹಾಗೂ 125 ನಗರ ಸಾರಿಗೆ ಸೇರಿದಂತೆ ಒಟ್ಟು 558 ಹೊಸ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ.<br><br>2025-26ನೇ ಸಾಲಿನಲ್ಲಿ 450 ಹೊಸ ಗ್ರಾಮಾಂತರ ಹಾಗೂ 11 ನಗರ ಸಾರಿಗೆ ಮಾದರಿಯ ವಾಹನಗಳನ್ನು ಖರೀದಿಸುವ ಯೋಜನೆ ಇದ್ದು, ಈವರೆಗೆ 11 ನಗರ ಸಾರಿಗೆ ವಾಹನಗಳನ್ನು ಖರೀದಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ. ಇನ್ನುಳಿದ 450 ಹೊಸ ಗ್ರಾಮಾಂತರ ವಾಹನಗಳನ್ನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>ಅಲ್ಲದೇ ಸಾರಿಗೆ ಸೇವೆಯನ್ನು ಉತ್ತಮಪಡಿಸಲು ಈ ಕೆಳಗಿನಂತೆ ಕ್ರಮಕೈಗೊಳ್ಳಲಾಗಿದೆ. |

| ವರ್ಷ | ಗ್ರಾಮಾಂತರ ಸಾರಿಗೆ | | ಉಪನಗರ ಸಾರಿಗೆ | |
|---|---|---|---|---|
| | ಅನುಸೂಚಿ | ಸರತಿಗಳು | ಅನುಸೂಚಿ | ಸರತಿಗಳು |
| 2023-24 | 3796 | 24547 | 218 | 3414 |
| 2024-25 | 4124 | 27609 | 236 | 3640 |
| **ವ್ಯತ್ಯಾಸ** | **328** | **3062** | **18** | **226** |
| 2024-25 | 4124 | 27609 | 236 | 3640 |
| 2025-26 | 4222 | 27922 | 240 | 3715 |
| **ವ್ಯತ್ಯಾಸ** | **98** | **313** | **4** | **75** |

2024-25ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 328 ಅನುಸೂಚಿಗಳಿಂದ 3062 ಸರತಿಗಳನ್ನು, ಉಪನಗರ ಪ್ರದೇಶದಲ್ಲಿ 18 ಅನುಸೂಚಿಗಳಿಂದ 226 ಸರತಿಗಳನ್ನು ಸಾರಿಗೆ ಸೌಲಭ್ಯ ಹೆಚ್ಚಿಸಲಾಗಿದೆ.

2025-26ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 98 ಅನುಸೂಚಿಗಳಿಂದ 313 ಸರತಿಗಳನ್ನು, ಉಪನಗರ ಪ್ರದೇಶದಲ್ಲಿ 4 ಅನುಸೂಚಿಗಳಿಂದ 75 ಸರತಿಗಳ ಸಾರಿಗೆ ಸೌಲಭ್ಯ ಹೆಚ್ಚಿಸಲಾಗಿದೆ.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:**

ಪ್ರಸ್ತುತ ಗ್ರಾಮೀಣ ಮತ್ತು ಉಪನಗರ ಪ್ರದೇಶಗಳಲ್ಲಿ ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆ/ಅವಶ್ಯಕತೆಗನುಗುಣವಾಗಿ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.

ಈ ಸಂಬಂಧ ನಿಗಮದ ವ್ಯಾಪ್ತಿಯಲ್ಲಿ ಹೆಚ್ಚಿನ ಜನಸಂದಣಿ ಮಾರ್ಗಗಳನ್ನು ಗುರುತಿಸಿ ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಸರತಿಗಳನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

ಪ್ರತಿ ತಿಂಗಳು ಮೊದಲನೇಯ ಸೋಮವಾರದಂದು ಎಲ್ಲಾ ವಿಭಾಗಗಳಲ್ಲಿ ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಮನವಿ/ಅಹವಾಲುಗಳನ್ನು ಪಡೆದುಕೊಂಡು ಕ್ರಮ ಜರುಗಿಸಲಾಗುತ್ತಿದೆ.

ನಿಗಮದಲ್ಲಿ "ಶಕ್ತಿ ಯೋಜನೆ" ಜಾರಿ ಪೂರ್ವ ಮತ್ತು ನಂತರ ಅನುಸೂಚಿ/ಸರತಿಗಳ ವಿವರ ಕೆಳಕಂಡಂತಿದೆ.

| ವಿವರ | ಶಕ್ತಿಯೋಜನೆ ಪೂರ್ವ | ಶಕ್ತಿಯೋಜನೆ ನಂತರ | ಹೆಚ್ಚುವರಿ |
|---|---|---|---|
| ಒಟ್ಟು ಅನುಸೂಚಿಗಳು | 4028 | 4715 | 687 |
| ಒಟ್ಟು ಅನುಸೂಚಿ ಕಿ.ಮೀ (ಲಕ್ಷಗಳಲ್ಲಿ) | 14.46 | 17.30 | 2.84 |
| ಒಟ್ಟು ಸರತಿಗಳ ಸಂಖ್ಯೆ | 22214 | 27974 | 5760 |

"ಶಕ್ತಿ ಯೋಜನೆ" ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 687 ಹೆಚ್ಚಿನ ಅನುಸೂಚಿಗಳಿಂದ 5760 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಇ. ಸಾರಿಗೆ ನಿಗಮಗಳಲ್ಲಿ ಚಾಲಕರು ಮತ್ತು ಪರಿಚಾರಕರ ಕೊರತೆಯಿಂದಾಗಿ ಹಲವು ಮಾರ್ಗಗಳಲ್ಲಿ ಸೇವೆಗಳು ಸ್ಥಗಿತಗೊಂಡಿವೆ ಎಂಬ ದೂರು ಇದ್ದು, KSRTC, NWKRTC, KKRTC ಮತ್ತು BMTC ಗಳಲ್ಲಿ ಒಟ್ಟಾರೆ ಎಷ್ಟು ಹುದ್ದೆಗಳು ಖಾಲಿಯಿದೆ; ಈ ಹುದ್ದೆಗಳ ಭರ್ತಿ ಯಾವ ಹಂತದಲ್ಲಿದೆ;

ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ ಚಾಲಕರ ಮತ್ತು ಪರಿಚಾರಕರ ಕೊರತೆಯಿಂದಾಗಿ ಹಲವು ಮಾರ್ಗಗಳಲ್ಲಿ ಸೇವೆಗಳನ್ನು ಸ್ಥಗಿತಗೊಳಿಸಿರುವುದಿಲ್ಲ.

ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರಲಿಲ್ಲ. ಆದರೆ **2023-24ನೇ ಸಾಲಿನಿಂದ ನವೆಂಬರ್-25ರವರೆಗೆ** ನೇರ ನೇಮಕಾತಿ ಮತ್ತು ಅನುಕಂಪದ ಆಧಾರದ ಮೇಲೆ ವೃಂದ 'ಸಿ" ಮತ್ತು "ಡಿ" ಹುದ್ದೆಗಳನ್ನು ಭರ್ತಿಗೊಳಿಸಿದ ವಿವರ ಕೆಳಕಂಡಂತಿದೆ:

| ನಿಗಮ | ನೇರ ನೇಮಕಾತಿ | ಅನುಕಂಪದ ನೇಮಕಾತಿ | ಒಟ್ಟು |
|---|---|---|---|
| ಕ.ರಾ.ರ.ಸಾ.ನಿ | 2276 | 334 | 2610 |
| ಬೆಂ.ಮ.ಸಾ.ಸಂ | 2500 | 334 | 2834 |
| ವಾ.ಕ.ರ.ಸಾ.ಸಂ | 1000 | 261 | 1261 |
| ಕ.ಕ.ರ.ಸಾ.ನಿ | 1609 | 312 | 1921 |
| **ಒಟ್ಟು** | **7385** | **1241** | **8626** |

ಪ್ರಸ್ತುತ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರ ಕೆಳಕಂಡಂತಿದೆ:-

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:-**

ನಿಗಮದಲ್ಲಿ ಅಕ್ಟೋಬರ್-2025ರ ಅಂತ್ಯಕ್ಕೆ ಕಾರ್ಯ ನಿರ್ವಹಣೆ/ ಖಾಲಿ ಇರುವ ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ:-

| ವೃಂದ | ಕಾರ್ಯನಿರ್ವಹಣೆ | ಖಾಲಿ |
|---|---|---|
| ಎ | 139 | 22 |
| ಬಿ | 145 | 56 |
| ಸಿ | 33497 | 7367 |
| ಡಿ | 510 | 71 |
| **ಒಟ್ಟು** | **34291** | **7516** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಬಡ್ತಿಗೆ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲಾಗುತ್ತಿದೆ. ಖಾಲಿ ಇರುವ ಹುದ್ದೆಗಳಲ್ಲಿ ಅತ್ಯಾವಶ್ಯಕ ಹುದ್ದೆಗಳ ನೇಮಕಾತಿಯ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-**<br><br>ಸಂಸ್ಥೆಯಲ್ಲಿ ಅಕ್ಟೋಬರ್-2025 ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಮತ್ತು ಖಾಲಿಯಿರುವ ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ:- |

| ವೃಂದ | ಕಾರ್ಯನಿರ್ವಹಣೆ | ಖಾಲಿ |
|---|---|---|
| ಎ | 60 | 7 |
| ಬಿ | 65 | 24 |
| ಸಿ | 29102 | 3694 |
| ಡಿ | 100 | 4 |
| **ಒಟ್ಟು** | **29327** | **3729** |

ಸಂಸ್ಥೆಯಲ್ಲಿ ಖಾಲಿ ಇರುವ 'ಎ' ವೃಂದದ ಹುದ್ದೆಗಳ ವೃಂದ ನಿಯಂತ್ರಣಾ ಪ್ರಾಧಿಕಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಭರ್ತಿಗೊಳಿಸಬೇಕಾಗಿರುತ್ತದೆ ಹಾಗೂ ಬಿ ವೃಂದದ ಅಧಿಕಾರಿಗಳ 11 ಹುದ್ದೆಗಳನ್ನು ಮತ್ತು ಸಿ ವೃಂದದ ಮೇಲ್ವಿಚಾರಕ/ ಮೇಲ್ವಿಚಾರಕೇತರ 2897 ಸೇರಿದಂತೆ ಒಟ್ಟು 2908 ಹುದ್ದೆಗಳನ್ನು ಭರ್ತಿಗೊಳಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಮುಂದುವರೆದು, ಮುಂಬಡ್ತಿಯಡಿ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿಗೊಳಿಸಲು ಕ್ರಮವಹಿಸಲಾಗುತ್ತಿದೆ.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**

ಸಂಸ್ಥೆಯಲ್ಲಿ ಅಕ್ಟೋಬರ್-2025ರ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಮತ್ತು ಖಾಲಿಯಿರುವ ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ:-

| ವೃಂದ | ಕಾರ್ಯನಿರ್ವಹಣೆ | ಖಾಲಿ |
|---|---|---|
| ಎ | 73 | 17 |
| ಬಿ | 80 | 61 |
| ಸಿ | 20713 | 2933 |
| ಡಿ | 295 | 70 |
| **ಒಟ್ಟು** | **21161** | **3081** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಪ್ರಸ್ತುತ ವಿವಿಧ ವೃಂದದ ದರ್ಜೆ-2 ರ 33 ಅಧಿಕಾರಿ ಹುದ್ದೆಗಳಿಗೆ ಹಾಗೂ ಸಹಾಯಕ ಸಂಚಾರ ನಿರೀಕ್ಷಕ ದರ್ಜೆ-3 ರ 19 ಹುದ್ದೆಗಳಿಗೆ ಜಾಹೀರಾತು ನೀಡಲಾಗಿದ್ದು, ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ ಹಾಗೂ ಪ್ರಸ್ತುತ 1000 ಚಾಲನಾ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.<br><br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:-<br>ನಿಗಮದ ಅಕ್ಟೋಬರ್-2025 ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಮತ್ತು ಖಾಲಿಯಿರುವ ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ:-<br>
<table>
<tr><th>ವೃಂದ</th><th>ಕಾರ್ಯನಿರ್ವಹಣೆ</th><th>ಖಾಲಿ</th></tr>
<tr><td>ಎ</td><td>87</td><td>10</td></tr>
<tr><td>ಬಿ</td><td>84</td><td>66</td></tr>
<tr><td>ಸಿ</td><td>18872</td><td>2270</td></tr>
<tr><td>ಡಿ</td><td>301</td><td>22</td></tr>
<tr><td>ಒಟ್ಟು</td><td>19344</td><td>2368</td></tr>
</table>
<br>ನಿಗಮದಲ್ಲಿ ನೇರ ನೇಮಕಾತಿಗೆ ಖಾಲಿ ಇರುವ ವಿವಿದ ವೃಂದದ ಹುದ್ದೆಗಳು ಸೇರಿ ಒಟ್ಟು ಸ್ಥಳೀಯ ವೃಂದದಲ್ಲಿ 2620 ಹುದ್ದೆಗಳ ಭರ್ತಿಗೊಳಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.</td></tr>
<tr><td>ಈ.</td><td>ಸಾರಿಗೆ ನಿಗಮಗಳ ಆರ್ಥಿಕ ನಷ್ಟ ಕಡಿಮೆ ಮಾಡಲು ಸರ್ಕಾರ ಯಾವುದೇ ವಿಶೇಷ ಪುನರುಜ್ಜೀವನ ಯೋಜನೆ ಅಥವಾ "Financial Restructuring Program" ರೂಪಿಸಿರುವುದೇ? (ಮಾಹಿತಿ ನೀಡುವುದು)</td><td>ರಾಜ್ಯ ರಸ್ತೆ ಸಾರಿಗೆ ನಿಗಮಗಳ ಆರ್ಥಿಕ ನಷ್ಟ ಕಡಿಮೆ ಮಾಡಲು ರೂಪಿಸಿರುವ ಯೋಜನೆಗಳು ಈ ಕೆಳಕಂಡಂತಿದೆ:-<br>• ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತವೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಿದೆ.<br>• ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿ ವೆಚ್ಚ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿ ನಿಗಮಕ್ಕೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗಿದ್ದ ಕಾರಣ ದಿನಾಂಕ:04/05-01-2025 ರಿಂದ ಜಾರಿಗೆ ಬರುವಂತೆ ಬಸ್ ಪ್ರಯಾಣ ದರವನ್ನು ಶೇಕಡ 15ರಷ್ಟು ಪರಿಷ್ಕರಣೆ ಮಾಡಲಾಗಿದೆ.<br>• ಸಾರಿಗೆ ನಿಗಮಗಳಿಗೆ ಹೊಸ ವಾಹನ ಖರೀದಿಗಾಗಿ 2023-24ನೇ ಸಾಲಿನಲ್ಲಿ ನಿಗಮಕ್ಕೆ ರೂ.500.00 ಕೋಟಿಗಳ ವಿಶೇಷ</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಬಂಡವಾಳ ಅನುದಾನವನ್ನು ಒದಗಿಸಲಾಗಿದೆ.<br>• ಸಾರಿಗೆ ನಿಗಮಗಳು ನವೆಂಬರ್–24ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತ ಪಾವತಿಸಲು ರೂ.2000.00 ಕೋಟಿ ಮೊತ್ತದ ಸಾಲವನ್ನು ಸರ್ಕಾರದ ಖಾತರಿ/ ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಪಡೆಯಲು ಅನುಮೋದನೆ ನೀಡಿದೆ.<br>• 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 700 ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳು ಸೇರಿದಂತೆ ಒಟ್ಟು 2000 ಡೀಸಲ್ ಬಸ್ಸುಗಳಿಗೆ ತಗಲುವ ವೆಚ್ಚವನ್ನು ಸರ್ಕಾರದಿಂದ ಭರಿಸಿ ಖರೀದಿಸಲು ಕ್ರಮವಹಿಸಲಾಗುತ್ತಿದೆ.<br>• ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020ರಿಂದ ದಿನಾಂಕ:28.02.2023ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ/ ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತದ ಪಾವತಿಗಾಗಿ ಒಟ್ಟು ರೂ.224.05 ಕೋಟಿಗಳನ್ನು ಬಿಡುಗಡೆಗೊಳಿಸಿದೆ.<br>• ನಾಲ್ಕು ಸಾರಿಗೆ ನಿಗಮಗಳ ನಗದು ಕೊರತೆಯನ್ನು ನಿಭಾಯಿಸಲು 2023-24 ಮತ್ತು 2024-25ನೇ ಸಾಲಿನಲ್ಲಿ ನಿಗಮಗಳು ಕ್ರಮವಾಗಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.581.47 ಕೋಟಿ ಮತ್ತು ರೂ.637.76 ಕೋಟಿ ಸೇರಿದಂತೆ ಒಟ್ಟು ರೂ.1219.23 ಕೋಟಿಗಳ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.<br><br>ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ನಷ್ಟವನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳ/ ಯೋಜನೆಗಳ ವಿವರಗಳನ್ನು **ಅನುಬಂಧ- ಇ** ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಟಿಡಿ 263 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-ಅ

## ನಾಲ್ಕು ನಿಗಮಗಳ ಬಾಕಿ ಮತ್ತು ಹೊಣೆಗಾರಿಕೆ ವಿವರಗಳು

(ರೂ.ಕೋಟಿಗಳಲ್ಲಿ)

| ಕ್ರಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 186.64 | 326.73 | 516.78 | 701.74 | 1028.99 | 1230.36 | 2344.89 | 3069.42 | 2000.37 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 122.84 | 182.75 | 271.93 | 301.78 | 410.49 | 325.10 | 223.67 | 267.45 | 351.95 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 224.05 | 224.05 | | |
| 4 | ಸಿಬ್ಬಂದಿಗಳ ಬಾಕಿ ಪಾವತಿ | 238.13 | 263.59 | 351.81 | 486.33 | 730.46 | 385.96 | 376.16 | 257.02 | 379.10 |
| 5 | ಇಂಧನ ಬಾಕಿ ಪಾವತಿ | 281.06 | 295.93 | 348.90 | 542.66 | 730.05 | 111.02 | 439.75 | 905.61 | 930.88 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 482.16 | 412.74 | 577.37 | 435.45 | 485.33 | 769.83 | 790.76 | 777.71 | 699.57 |
| I | ಒಟ್ಟು | **1310.83** | **1481.74** | **2066.79** | **2467.96** | **3385.32** | **3046.32** | **4399.28** | **5277.21** | **4361.87** |
| II | ಸಾಲದ ಬಾಕಿ ಹೊಣೆಗಾರಿಕೆ | 1301.89 | 1171.93 | 1277.29 | 1389.98 | 1365.96 | 1053.06 | 863.90 | 1045.09 | 2,647.88 |
| I+II | ಒಟ್ಟು (I+II) | **2612.72** | **2653.67** | **3344.08** | **3857.94** | **4751.28** | **4099.38** | **5263.18** | **6322.30** | **7009.75** |

Chief Accounts Officer-FA
KSRTC, Central Office
Bangalore
9/12

- 1 -

## ಬಾಕಿ ಮತ್ತು ಹೊಣೆಗಾರಿಕೆ ವಿವರಗಳು – ಕರಾರಸಾನಿ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | - | - | 48.70 | 230.44 | 455.49 | 583.24 | 820.86 | 880.53 | 424.61 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 12.61 | 18.27 | 24.48 | 63.54 | 68.44 | 48.03 | 18.86 | 51.60 | 67.20 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 86.55 | 86.55 | | - |
| 4 | ಸಿಬ್ಬಂದಿಗಳ ಬಾಕಿ ಪಾವತಿ | - | | 5.50 | 8.50 | 97.73 | 69.48 | 56.38 | 11.50 | 68.21 |
| 5 | ಇಂಧನ ಬಾಕಿ ಪಾವತಿ | 112.03 | 121.31 | 166.99 | 302.55 | 379.92 | 35.41 | 169.00 | 268.66 | 263.75 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 181.78 | 82.42 | 134.06 | 143.07 | 163.31 | 180.32 | 119.05 | 124.12 | 117.24 |
| I | ಒಟ್ಟು | **305.92** | **222.00** | **379.73** | **748.10** | **1,164.89** | **1,003.03** | **1,270.70** | **1,336.41** | **941.01** |
| II | ಸಾಲದ ಬಾಕಿ ಹೊಣೆಗಾರಿಕೆ | 282.38 | 252.23 | 260.54 | 353.20 | 265.55 | 208.15 | 179.14 | 256.15 | 806.23 |
| I+II | ಒಟ್ಟು (I+II) | 588.30 | 474.23 | 640.27 | 1,101.30 | 1,430.44 | 1,211.18 | 1,449.84 | 1,592.56 | 1,747.24 |

Chief Accounts Officer-FA
KSRTC, Central Office
Bangalore 9/12

## ಬಾಕಿ ಮತ್ತು ಹೊಣೆಗಾರಿಕೆ ವಿವರಗಳು – ಬೆಮಸಾಸಂಸ್ಥೆ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 96.58 | 213.60 | 362.90 | 215.20 | 146.07 | 81.12 | 485.49 | 943.58 | 868.64 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 66.98 | 66.00 | 121.19 | 86.36 | 90.06 | 9.79 | 99.94 | 163.90 | 192.74 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 50.25 | 50.25 | | |
| 4 | ಸಿಬ್ಬಂದಿಗಳ ಬಾಕಿ ಪಾವತಿ | 135.76 | 140.06 | 198.09 | 273.48 | 362.54 | 175.87 | 187.13 | 185.90 | 197.55 |
| 5 | ಇಂಧನ ಬಾಕಿ ಪಾವತಿ | 57.26 | 54.25 | 51.26 | 85.73 | 70.21 | 31.81 | 119.34 | 429.55 | 386.58 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 246.67 | 282.32 | 375.01 | 221.71 | 214.50 | 442.03 | 359.50 | 356.96 | 463.48 |
| I | ಒಟ್ಟು | **603.25** | **756.23** | **1,108.45** | **882.48** | **883.38** | **790.87** | **1,301.65** | **2,079.89** | **2,108.99** |
| II | ಸಾಲದ ಬಾಕಿ ಹೊಣೆಗಾರಿಕೆ | 800.32 | 650.70 | 672.63 | 679.20 | 764.95 | 592.99 | 369.07 | 560.16 | 915.08 |
| I+II | ಒಟ್ಟು (I+II) | **1,403.57** | **1,406.93** | **1,781.08** | **1,561.68** | **1,648.33** | **1,383.86** | **1,670.72** | **2,640.05** | **3,024.07** |

Chief Accounts Officer-FA
KSRTC, Central Office
Bangalore 9/12

## ಬಾಕಿ ಮತ್ತು ಹೊಣೆಗಾರಿಕೆ ವಿವರಗಳು –ವಾಕರಸಾಸಂಸ್ಥೆ

(ರೂ.ಕೋಟಿಗಳಲ್ಲಿ)

| ಕ್ರಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 76.53 | 97.76 | 94.42 | 239.52 | 407.61 | 547.89 | 866.14 | 1,149.20 | 681.12 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 24.23 | 90.29 | 115.48 | 140.22 | 234.69 | 256.28 | 75.92 | 25.90 | 62.48 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 51.50 | 51.50 | | - |
| 4 | ಸಿಬ್ಬಂದಿಗಳ ಬಾಕಿ ಪಾವತಿ | 69.90 | 93.01 | 111.58 | 166.22 | 226.83 | 107.36 | 77.20 | 18.62 | 65.09 |
| 5 | ಇಂಧನ ಬಾಕಿ ಪಾವತಿ | 56.70 | 61.75 | 73.67 | 75.16 | 164.08 | 19.17 | 74.41 | 86.40 | 161.30 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 43.00 | 33.33 | 39.13 | 51.52 | 68.01 | 101.67 | 90.22 | 80.17 | 77.03 |
| I | ಒಟ್ಟು | **270.36** | **376.14** | **434.28** | **672.64** | **1,101.22** | **1,083.87** | **1,235.39** | **1,360.29** | **1,047.02** |
| II | ಸಾಲದ ಬಾಕಿ ಹೊಣೆಗಾರಿಕೆ | 148.31 | 133.54 | 250.93 | 280.71 | 229.13 | 169.14 | 111.29 | 72.28 | 656.50 |
| I+II | ಒಟ್ಟು (I+II) | **418.67** | **509.68** | **685.21** | **953.35** | **1,330.35** | **1,253.01** | **1,346.68** | **1,432.57** | **1,703.52** |

Chief Accounts Officer-FA
KSRTC, Central Office
Bangalore
9/12

## ಬಾಕಿ ಮತ್ತು ಹೊಣೆಗಾರಿಕೆ ವಿವರಗಳು –ಕಕರಸಾಸಂಸ್ಥೆ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 13.53 | 15.37 | 10.76 | 16.58 | 19.82 | 18.11 | 172.40 | 96.11 | 26.00 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 19.02 | 8.19 | 10.78 | 11.66 | 17.30 | 11.00 | 28.95 | 26.05 | 29.53 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | 0.00 | 0.00 | 0.00 | 0.00 | 0.00 | 35.75 | 35.75 | | |
| 4 | ಸಿಬ್ಬಂದಿಗಳ ಬಾಕಿ ಪಾವತಿ | 32.47 | 30.52 | 36.64 | 38.13 | 43.36 | 33.25 | 55.45 | 41.00 | 48.25 |
| 5 | ಇಂಧನ ಬಾಕಿ ಪಾವತಿ | 55.07 | 58.62 | 56.98 | 79.22 | 115.84 | 24.63 | 77.00 | 121.00 | 119.25 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 11.71 | 14.67 | 29.17 | 19.15 | 39.51 | 45.81 | 221.99 | 216.46 | 41.82 |
| I | ಒಟ್ಟು | **131.30** | **127.37** | **144.33** | **164.74** | **235.83** | **168.55** | **591.54** | **500.62** | **264.85** |
| II | ಸಾಲದ ಬಾಕಿ ಹೊಣೆಗಾರಿಕೆ | 70.88 | 135.46 | 93.19 | 76.87 | 106.33 | 82.78 | 204.40 | 156.50 | 270.07 |
| I+II | ಒಟ್ಟು (I+II) | **202.18** | **262.83** | **237.52** | **241.61** | **342.16** | **251.33** | **795.94** | **657.12** | **534.92** |

Chief Accounts Officer-EA
KSRTC, Central Office
Bangalore

ಅನುಬಂಧ- 8

## ಕ.ರಾ.ರ.ಸಾ.ನಿಗಮವು ನಷ್ಟದಲ್ಲಿರಲು ಪ್ರಮುಖ ಕಾರಣಗಳು

- ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ. ಮಂಡ್ಯ, ಹಾಸನ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಪುತ್ತೂರು, ಕೊಡಗು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರಾರಸಾ ನಿಗಮದ ವತಿಯಿಂದ ಸಾಕಷ್ಟು ಸಂಖ್ಯೆಯಲ್ಲಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಆದಾಗ್ಯೂ, ಮೇಲ್ಕಂಡ ಜಿಲ್ಲೆಗಳ ವ್ಯಾಪ್ತಿಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಖಾಸಗಿ ಪ್ರವರ್ತಕರ ಖಾಸಗಿ ಬಸ್, ಮ್ಯಾಕ್ಸಿಕ್ಯಾಬ್, ಜೀಪ್, ಅಪೆಆಟೋ, ಮಿನಿಬಸ್, ಇತ್ಯಾದಿ, ಪ್ರಯಾಣಿಕರ ವಾಹನಗಳು ಅನಧಿಕೃತವಾಗಿ ಕಾರ್ಯಾಚರಣೆಯಾಗುತ್ತಿರುವುದು ಕಂಡುಬಂದಿರುತ್ತದೆ. ಸದರಿ ಖಾಸಗಿ ಪ್ರವರ್ತಕರು Contract Carriage/All India Tourist Permit ಪರವಾನಗಿಗಳನ್ನು ಪಡೆದು, ಕಾನೂನು ಬಾಹಿರವಾಗಿ ಮಜಲು ಸಾರಿಗೆಗಳನ್ನಾಗಿ (stage Carriage) ಕಾರ್ಯಾಚರಣೆ ಮಾಡುವುದರ ಜೊತೆಗೆ ರಾಷ್ಟ್ರೀಕೃತವಲ್ಲದ ಒಳಮಾರ್ಗಗಳಲ್ಲಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುವುದಾಗಿ ತಿಳಿಸಿ ಮಜಲು ಸಾರಿಗೆ (Stage Carriage) ಪರವಾನಗಿಗಳನ್ನು ಪಡೆದು ರಾಷ್ಟ್ರೀಕೃತ ಮತ್ತು ಮುಖ್ಯ ಮಾರ್ಗಗಳಲ್ಲಿ ಕಳ್ಳಾಟಿಕೆ ಕಾರ್ಯಾಚರಣೆ ಮಾಡಿ ನಿಗಮದ ಸಾರಿಗೆಗಳೊಂದಿಗೆ ಅನಾರೋಗ್ಯ ಕರಪೈಪೋಟಿನಡೆಸಿ ನಿಗಮದ ಸಾರಿಗೆಗಳ ಆದಾಯಕ್ಕೆಧಕ್ಕೆ ಉಂಟು ಮಾಡುತ್ತಿರುತ್ತಾರೆ.

- ಕ.ರಾ.ರ.ಸಾ.ನಿಗಮದ ಹಲವಾರು ಬಸ್ಸು ನಿಲ್ದಾಣದ ಪ್ರದೇಶಗಳಲ್ಲಿ ಖಾಸಗಿ ಪ್ರವರ್ತಕರ ಬಸ್ಸುಗಳನ್ನು ನಿಲ್ಲಿಸಲು ನಿರ್ಬಂಧ ವಿದ್ದರೂ ಹಲವಾರು ಬಸ್ಸು ನಿಲ್ದಾಣಗಳ ಸುತ್ತಮುತ್ತ ಖಾಸಗಿ ಪ್ರವರ್ತಕರು ನಿಯಮಾವಳಿಗಳನ್ನು ಉಲಂಘಿಸಿ ಬಸ್ಸು ನಿಲ್ದಾಣದ ಸುತ್ತಮುತ್ತ ಪ್ರಯಾಣಿಕರನ್ನು ಹತ್ತಿಸಿ ಕೊಳ್ಳುತ್ತಿದ್ದು ಇದರಿಂದ ನಿಗಮಕ್ಕೆ ನ್ಯಾಯೋಚಿತವಾಗಿ ಬರಬೇಕಾದ ಆದಾಯಕ್ಕೆ ಧಕ್ಕೆಯುಂಟು ಮಾಡುತ್ತಿದ್ದಾರೆ.

- ಕ.ರಾ.ರ.ಸಾ.ನಿಗಮದಲ್ಲಿ ಆಕ್ಟೋಬರ್-2025 ರ ಅಂತ್ಯಕ್ಕೆ 8252 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಅದರಲ್ಲಿ2 917 ಅನುಸೂಚಿಗಳು ಸಾಮಾನ್ಯ ಅನುಸೂಚಿಗಳಾಗಿರುತ್ತವೆ. ಶೇ.35.35ರಷ್ಟು ಸಾರಿಗೆಗಳನ್ನು ಗ್ರಾಮೀಣ ಭಾಗಗಳಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಜನಪ್ರತಿನಿಧಿಗಳ ಬೇಡಿಕೆ ಗನುಗುಣವಾಗಿ ಕಾರ್ಯಾಚರಿಸಲಾಗುತ್ತಿದೆ. ನಿಗಮದ ವ್ಯಾಪ್ತಿಯ ಮಾರ್ಗಗಳಲ್ಲಿ ಒಟ್ಟು 52317 ಸಿಂಗಲ್ಟ್ರಿಪ್‌ಗಳನ್ನು ಪ್ರತಿದಿನ ಶೇ.55.14 ರಷ್ಟು ಸ್ಥಳೀಯ ಗ್ರಾಮಾಂತರ ಪ್ರದೇಶಗಳಿಗೆ ಗುತ್ತಿರುತ್ತದೆ. ಸದರಿ ಟ್ರಿಪ್‌ಗಳ ಕಾರ್ಯಾಚರಣೆಯಿಂದ ನಷ್ಟ ಉಂಟಾಗುತ್ತಿದ್ದರೂ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿಅ ನಿವಾರ್ಯವಾಗಿ ಸಾರಿಗೆಗಳನ್ನು (Obligatory Services) ಕಾರ್ಯಾಚರಣೆ ಮಾಡಬೇಕಾಗಿರುವ ಪರಿಸ್ಥಿತಿ ಇರುತ್ತದೆ.

- ನಗರದ ಸಾರ್ವಜನಿಕ ಪ್ರಯಾಣಿಕರಿಗೆ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ನಿಗಮವು ಆಕ್ಟೋಬರ್-2025 ರ ಅಂತ್ಯಕ್ಕೆ 13 ನಗರಗಳಲ್ಲಿ 520 ನಗರ ಸಾರಿಗೆ ವಾಹನಗಳನ್ನು ಕಾರ್ಯಾಚರಣೆ ಮಾಡಿದ್ದು, ಈ ಪೈಕಿ ಹೆಚ್ಚಿನ ಸಾರಿಗೆಗಳು ನಷ್ಟದಲ್ಲಿ ಕಾರ್ಯಾಚರಣೆಯಾಗುತ್ತಿರುತ್ತವೆ.

- ಡೀಸಲ್ ತೈಲ, ಬಿಡಿಭಾಗಗಳು, ಟೈರ್, ಟ್ಯೂಬ್ ಮುಂತಾದ ಸಾಮಾಗ್ರಿಗಳ ಬೆಲೆ ಹೆಚ್ಚಳದಿಂದ ಮತ್ತು ಸಿಬ್ಬಂದಿ ವೆಚ್ಚದ ಹೆಚ್ಚಳದಿಂದ ಕಾರ್ಯಾಚರಣೆಯ ವೆಚ್ಚವು ಅಧಿಕಗೊಂಡು ವೆಚ್ಚಕ್ಕೆ ಅನುಗುಣವಾಗಿ ನಿರೀಕ್ಷಿತ ಆದಾಯ ಬಾರದಿರುವುದರಿಂದ ನಷ್ಟ ಉಂಟಾಗುತ್ತಿರುತ್ತದೆ.

Ymmaja.H.

**ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ**

## ನಿಗಮವು ನಷ್ಟದಲ್ಲಿರಲು ಕಾರಣಗಳು:

- ಖಾಸಗಿ ಪ್ರವರ್ತಕರು Contract Carriage/All India Tourist Permit ಪರವಾನಗಿಗಳನ್ನು ಪಡೆದು, ಕಾನೂನು ಬಾಹಿರವಾಗಿ ಮಜಲು ಸಾರಿಗೆಗಳನ್ನಾಗಿ (stage Carriage) ಕಾರ್ಯಾಚರಣೆ ಮಾಡುವುದರ ಜೊತೆಗೆ ರಾಷ್ಟ್ರೀಕೃತವಲ್ಲದ ಒಳಮಾರ್ಗಗಳಲ್ಲಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುವುದಾಗಿ ತಿಳಿಸಿ ಮಜಲು ಸಾರಿಗೆ (Stage Carriage) ಪರವಾನಗಿಗಳನ್ನು ಪಡೆದು ರಾಷ್ಟ್ರೀಕೃತ ಮತ್ತುಮುಖ್ಯ ಮಾರ್ಗಗಳಲ್ಲಿ ಕಳ್ಳಾಟಿಕೆ ಕಾರ್ಯಾಚರಣೆ ಮಾಡಿ ನಿಗಮದ ಸಾರಿಗೆಗಳೊಂದಿಗೆ ಅನಾರೋಗ್ಯಕರ ಪೈಪೋಟಿ ನಡೆಸಿ ನಿಗಮದ ಸಾರಿಗೆಗಳ ಆದಾಯಕ್ಕೆ ಧಕ್ಕೆ ಉಂಟು ಮಾಡುತ್ತಿರುತ್ತಾರೆ.

- ಕ.ಕ.ರ.ಸಾ.ನಿಗಮದ ವ್ಯಾಪ್ತಿಯ ಬಸ್ಸು ನಿಲ್ದಾಣದ ಪ್ರದೇಶಗಳಲ್ಲಿ ಖಾಸಗಿ ಪ್ರವರ್ತಕರ ಬಸ್ಸುಗಳನ್ನು ನಿಲ್ಲಿಸಲು ನಿರ್ಬಂಧವಿದ್ದರೂ ಹಲವಾರು ಬಸ್ಸು ನಿಲ್ದಾಣಗಳ ಸುತ್ತಮುತ್ತ ಖಾಸಗಿ ಪ್ರವರ್ತಕರು ನಿಯಮಾವಳಿಗಳನ್ನು ಉಲ್ಲಂಘಿಸಿ ಬಸ್ಸು ನಿಲ್ದಾಣದ ಸುತ್ತಮುತ್ತ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿದ್ದು, ಇದರಿಂದ ನಿಗಮಕ್ಕೆ ನ್ಯಾಯೋಚಿತವಾಗಿ ಬರಬೇಕಾದ ಆದಾಯಕ್ಕೆ ಧಕ್ಕೆಯುಂಟು ಮಾಡುತ್ತಿದ್ದಾರೆ.

- ಕ.ಕ.ರ.ಸಾ ನಿಗಮದಲ್ಲಿ ಆಕ್ಟೋಬರ್-2025 ರ ಅಂತ್ಯಕ್ಕೆ 4715 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಅದರಲ್ಲಿ 1949 ಅನುಸೂಚಿಗಳು ಸಾಮಾನ್ಯ ಅನುಸೂಚಿಗಳಾಗಿರುತ್ತವೆ. ಶೇ.41.33 ರಷ್ಟು ಸಾರಿಗೆಗಳನ್ನು ಗ್ರಾಮೀಣ ಭಾಗಗಳಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಜನಪ್ರತಿನಿಧಿಗಳ ಬೇಡಿಕೆಗನುಗುಣವಾಗಿ ಕಾರ್ಯಾಚರಿಸಲಾಗುತ್ತಿದೆ. ನಿಗಮದ ವ್ಯಾಪ್ತಿಯ ಮಾರ್ಗಗಳಲ್ಲಿ ಒಟ್ಟು 27974 ಸಿಂಗಲ್ ಟ್ರಿಪ್‌ಗಳನ್ನು ಪ್ರತಿ ದಿನ ಕಾರ್ಯಾಚರಣೆ ಮಾಡುತ್ತಿದ್ದು, ಅದರಲ್ಲಿ 17028 ಸಾಮಾನ್ಯ ಸುತ್ತುವಳಿಗಳನ್ನು ಅಂದರೆ ಶೇ.60.87 ರಷ್ಟು ಸ್ಥಳೀಯ ಗ್ರಾಮಾಂತರ ಪ್ರದೇಶಗಳಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸುತ್ತುವಳಿಗಳಲ್ಲಿ ನಿರೀಕ್ಷಿತ ಸಾರಿಗೆ ಆದಾಯ ಬರದೆ ನಷ್ಟ ಉಂಟಾಗುತ್ತಿರುತ್ತದೆ. ಸದರಿ ಟ್ರಿಪ್‌ಗಳ ಕಾರ್ಯಾಚರಣೆಯಿಂದ ನಷ್ಟ ಉಂಟಾಗುತ್ತಿದ್ದರೂ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅನಿವಾರ್ಯವಾಗಿ ಸಾರಿಗೆಗಳನ್ನು (Obligatory Services) ಕಾರ್ಯಾಚರಣೆ ಮಾಡಬೇಕಾಗಿರುವ ಪರಿಸ್ಥಿತಿ ಇರುತ್ತದೆ.

- ಡೀಸೆಲ್ ತೈಲ, ಬಿಡಿಭಾಗಗಳು, ಟೈರ್, ಟ್ಯೂಬ್ ಮುಂತಾದ ಸಾಮಗ್ರಿಗಳ ಬೆಲೆ ಹೆಚ್ಚಳದಿಂದ ಮತ್ತು ಸಿಬ್ಬಂದಿ ವೆಚ್ಚದ ಹೆಚ್ಚಳದಿಂದ ಕಾರ್ಯಾಚರಣೆಯ ವೆಚ್ಚವು ಹೆಚ್ಚಾಗಿ ನಷ್ಟ ಉಂಟಾಗುತ್ತಿರುತ್ತದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು,
ಕ.ಕ.ರ.ಸಾ.ನಿ. ಕೇ.ಕ., ಕಲಬುರಗಿ



Scanned with OKEN Scanner

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳು ನಷ್ಟವನ್ನು ಅನುಭವಿಸಲು ಪ್ರಮುಖ ಕಾರಣಗಳು :**

**<u>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-</u>**

- ಸಂಸ್ಥೆಯ ಒಟ್ಟಾರೆ ವೆಚ್ಚದಲ್ಲಿ ಸುಮಾರು ಶೇ.80.0 ರಷ್ಟು ಪಾಲು ಸಿಬ್ಬಂದಿ ವೆಚ್ಚ ಮತ್ತು ಇಂಧನ ವೆಚ್ಚಗಳಾಗಿರುತ್ತದೆ. ಪ್ರತಿ ವರ್ಷವೂ ಹೆಚ್ಚಾಗುತ್ತಿರುವ ಸಿಬ್ಬಂದಿ ವೆಚ್ಚ.

- ಇಂಧನ ದರ ಹೆಚ್ಚಳದಿಂದ ಅಧಿಕವಾಗುತ್ತಿರುವ ಇಂಧನ ವೆಚ್ಚ, ಉಗ್ರಾಣ ಸಾಮಗ್ರಿಗಳ ವೆಚ್ಚ ಹೆಚ್ಚಾಗಿರುವುದು.

- ಬೆಂಗಳೂರು ಮಹಾನಗರದಲ್ಲಿ ಓಲಾ, ಉಬರ್, ಇತರೇ ಕ್ಯಾಬ್‌ಗಳ ಕಾರ್ಯಾಚರಣೆಯಿಂದಾಗಿ ಸಾರಿಗೆ ಆದಾಯದ ಗಳಿಕೆಯಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

- ಸಂಸ್ಥೆಯು ನೀಡುತ್ತಿರುವ ಉಚಿತ/ ರಿಯಾಯಿತಿ ವಿದ್ಯಾರ್ಥಿ ಪಾಸುಗಳು ಶೇ.50 ವೆಚ್ಚವನ್ನು ಸರ್ಕಾರ, ಶೇ.25 ರಷ್ಟು ವೆಚ್ಚವನ್ನು ಸಂಸ್ಥೆ ಹಾಗೂ ಶೇ.25 ರಷ್ಟು ವೆಚ್ಚವನ್ನು ವಿದ್ಯಾರ್ಥಿಗಳಿಂದ ಸಂಗ್ರಹ ಮಾಡಬೇಕಾಗಿರುತ್ತದೆ. ಆದರೆ ಪ್ರಸ್ತುತ ಸರ್ಕಾರವು ಮರುಪಾವತಿ ರೂಪದಲ್ಲಿ ನೀಡುತ್ತಿರುವ ಮೊತ್ತದಲ್ಲಿನ ಹಾಗೂ ವಿದ್ಯಾರ್ಥಿಗಳಿಂದ ಸಂಗ್ರಹವಾಗುತ್ತಿರುವ ಮೊತ್ತದಲ್ಲಿನ ಕೊರತೆ ಮತ್ತು ಸಂಸ್ಥೆಯು ಭರಿಸುತ್ತಿರುವ ಶೇ.25 ರಷ್ಟು ವೆಚ್ಚ ಒಟ್ಟಾರೆಯಾಗಿ ಶೇ.50ರಷ್ಟು ವೆಚ್ಚವು ಸಂಸ್ಥೆಗೆ ಅಧಿಕ ಹೊರೆಯಾಗಿರುತ್ತದೆ

- ಬೆಂಮಸಾಸಂಸ್ಥೆಯು ಬೆಂಗಳೂರು ನಗರಕ್ಕೆ ಸಾರಿಗೆ ಸೌಲಭ್ಯ ಒದಗಿಸಲು ಏಕಸ್ವಾಮ್ಯತೆಯನ್ನು ಹೊಂದಿರುತ್ತದೆ. ನಗರದಲ್ಲಿ ದಿನೇ ದಿನೇ ಖಾಸಗಿ ವಾಹನಗಳ ಸಂಖ್ಯೆಯು ಹೆಚ್ಚಾಗಿ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಂಸ್ಥೆಯ ಭೌತಿಕ ಅಂಶಗಳ ಗುರಿಯನ್ನು ಸಾಧಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿದೆ.

- ಸಂಚಾರ ದಟ್ಟಣೆಯಿಂದ ನಿಗದಿತ ಕಿ.ಮೀಗಳ ಆಚರಣೆ ಕಷ್ಟಸಾಧ್ಯವಾಗಿದ್ದು, ವಾಹನಗಳ ಬಳಕೆ (Vehicle Utilization) ಕಡಿಮೆಯಾಗಿರುತ್ತದೆ.

- ಸಂಸ್ಥೆಯು ತನ್ನ ಬಂಡವಾಳ ವೆಚ್ಚಗಳಿಗಾಗಿ ರಾಷ್ಟ್ರೀಕೃತ ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳಿಂದ ಸಾಲಗಳನ್ನು ಪಡೆದಿದ್ದು, ಸಾಲಗಳ ಮೇಲಿನ ಬಡ್ಡಿಯು ಸಹ ನಷ್ಟಕ್ಕೆ ಕಾರಣವಾಗಿರುತ್ತದೆ.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**

- ದಿ:31-03-2025ಕ್ಕೆ ಇದ್ದಂತೆ ವಾ.ಕ.ರ.ಸಾ.ಸಂಸ್ಥೆಯ ಸಂಚಿತ ನಷ್ಟ ಒಟ್ಟು ರೂ.2299.40 ಕೋಟಿಗಳಾಗಿರುತ್ತದೆ.
- ಇಂಧನ ಬೆಲೆಯು ಗಣನೀಯವಾಗಿ ಹೆಚ್ಚಳವಾಗಿರುವುದರಿಂದ ಅದರ ಅನುಗುಣವಾಗಿ ಪ್ರಯಾಣ ದರದಲ್ಲಿ ಏರಿಕೆ ಆಗದ ಕಾರಣ ಹಾಗೂ ಸಿಬ್ಬಂದಿ ವೆಚ್ಚದಲ್ಲಿಯೂ ಸಹ ಹೆಚ್ಚಳವಾಗಿರುವುದರಿಂದ ಪ್ರತಿ ಕಿ.ಮೀ ಕಾರ್ಯಾಚರಣೆಯ ವೆಚ್ಚವು ಅಧಿಕವಾಗಿದ್ದು, ಸಂಸ್ಥೆಗೆ ನಷ್ಟವಾಗಲು ಕಾರಣವಾಗಿರುತ್ತದೆ.
- ಕೊರೋನಾ (ಕೋವಿಡ್-19) ಅಲೆಯ ಪರಿಣಾಮವಾಗಿ ಸಂಸ್ಥೆಯು ಅನುಭವಿಸಿದ ನಷ್ಟದ ಪ್ರಮಾಣವು ಹೆಚ್ಚಿಗೆಯಾಗಲು ಕಾರಣವಾಗಿದೆ

ಅನುಬಂಧ- 7

**ಕ.ರಾ.ರ.ಸಾ.ನಿಗಮವನ್ನು ನಷ್ಟ ಕಡಿಮೆಗೊಳಿಸಲು /ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡಿರುವ ಕ್ರಮಗಳ/ಯೋಜನೆಗಳ ವಿವರಗಳು**

- ಕ.ರಾ.ರ.ಸಾ.ನಿಗಮದವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿಸ್ಲೀಪರ್, ನಾನ್ಎಸಿಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್, ಅಂಬಾರಿ ಉತ್ಸವ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಪುದುಚೆರಿ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರ ರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿ ಕೊಳ್ಳುವ ಪ್ರಸ್ತಾವನೆ ಇದ್ದು ಒಪ್ಪಂದಗಳ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಈ ರಾಜ್ಯಗಳ ಜೊತೆಗೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯಗಳಿಸಲು ಅವಕಾಶವಾಗುವುದು.
- ಕ.ರಾ.ರ.ಸಾನಿಗಮವು ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine) ಜಾರಿಗೆತಂದಿರುತ್ತದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟ್ ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸು ವಎಂ- ಬುಕಿಂಗ್ ಮತ್ತು ಇ- ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ.
- ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಮೈಸೂರು ನಗರದ ನಗರ ಸಾರಿಗೆ ವಾಹನಗಳಲ್ಲಿ ಐ.ಟಿ.ಎಸ್ (ಇಂಟೆಲಿಜೆಂಟಗ ಟ್ರ್ಯಾನ್ಸ್‌ಪೋರ್ಟ್ ಸಿಸ್ಟಮ್) ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಘೋಷಣೆಯ ವ್ಯವಸ್ಥೆಯನ್ನು ಅಳವಡಿಸಲಾಗಿದೆ. (ಪ್ಯಾಸೆಂಜರ್ ಅನೌನ್ಸ್‌ಮೆಂಟ್ ಸಿಸ್ಟಮ್)
- ಚಾಲನಾ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ ಘಟಕಗಳಲ್ಲಿ ಗಣಕೀಕೃತ ಡ್ಯೂಟಿರೋಟಾ ಸಿಸ್ಟಮ್‌ನ್ನು ಅಳವಡಿಸಿ ಮಾರ್ಗ ನಿಯೋಜನೆಯಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ನಿಗಮದ ಘಟಕಗಳಲ್ಲಿನ ಚಾಲನಾ/ತಾಂತ್ರಿಕ ಸಿಬ್ಬಂದಿಯ ರಜೆ ಮಂಜೂರಾತಿಯಲ್ಲಿ ಪಾರದರ್ಶಕತೆ ತರಲು ರಜೆ ಪಡೆಯುವ ಸಿಬ್ಬಂದಿಗಳು ಮೊಬೈಲ್/ಗಣಕಯಂತ್ರಗಳ ಮೂಲಕ ರಜೆ ಪಡೆಯುವ ಗಣಕೀಕೃತ ರಜೆ ವ್ಯವಸ್ಥೆಯನ್ನು (Online Leave Management System)/HRMS ಅಳವಡಿಸಲಾಗಿದೆ.
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 111 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
- ಕ.ರಾ.ರ.ಸಾ.ನಿಗಮದ ವತಿಯಿಂದ ವಿವಿಧ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಇನ್ನೂ ಹಲವು ಪ್ರವಾಸಿ ತಾಣಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗುವುದು.
- ನಿಗಮದ ಚಾಲಕರಿಗೆ "ಅಪಘಾತ ರಹಿತ ಮತ್ತು ಇಂದನ ಕ್ಷಮತೆ" ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಅಪಘಾತಗಳ ಪ್ರಮಾಣವನ್ನು ತಗ್ಗಿಸಲು ಹಾಗೂ ಇಂಧನ ಕೆ.ಎಂ.ಪಿ.ಎಲ್ ವೃದ್ಧಿಸುವ ಮೂಲಕ ಡೀಸೆಲ್ ಮೇಲಿನ ವೆಚ್ಚ ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ.
- ನಿಗಮದ 8 ರಿಂದ 9 ಲಕ್ಷ ಕಿ.ಮೀ ಕ್ರಮಿಸಿ ತಾಂತ್ರಿಕವಾಗಿ ಸುಸ್ಥಿತಿಯಲ್ಲಿದ್ದು ಕವಚ ದೋಷವಿರುವ ವಾಹನಗಳನ್ನು ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಕವಚ ಪುನರ್ ನಿರ್ಮಾಣ ಮಾಡಿ ಕಾರ್ಯಚರಣೆ ಮಾಡವ ಮೂಲಕ ಹೊಸ ವಾಹನ ಖರೀದಿ ಮೇಲಿನ ವೆಚ್ಚ ಕಡಿಮೆ ಮಾಡಲಾಗಿದೆ.

Gururaja.H
**ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ**

**ವಾಕರಸಾಸಂಸ್ಥೆಯ ಆರ್ಥಿಕ ನಷ್ಟ ಕಡಿಮೆ ಮಾಡಲು ಕೈಗೊಂಡ ಕ್ರಮಗಳ ವಿವರಗಳು**

- ಸಂಸ್ಥೆಗೆ ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ದಿನಾಂಕ: 04/05.01.2025 ರಿಂದ ಜಾರಿಗೆ ಬರುವಂತೆ ಪ್ರಯಾಣದರ ಪರಿಷ್ಕರಣೆ ಮಾಡಲಾಗಿದೆ.
- ವಾಕರಸಾಸಂಸ್ಥೆಯಿಂದ ಸಾಮಾನ್ಯ, ನಗರ/ಉಪನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ರಾಜಹಂಸ, ವೋಲ್ವೋ ಮಲ್ಟಿ ಆಕ್ಸೆಲ್, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಅಂಬಾರಿ ಉತ್ಸವ, ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಟಿಕೇಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine) ಜಾರಿಗೆ ತಂದಿರುತ್ತದೆ. ಇ.ಟಿ.ಎಂ. ಯಂತ್ರಗಳಿಂದ ವಿತರಿಸುವ ಟಿಕೇಟುಗಳಿಗೆ UPI ಮೂಲಕ ಹಣ ಪಾವತಿಸುವ ವ್ಯವಸ್ಥೆ ಕಲ್ಪಿಸಲಾಗಿದೆ.
- ಸಂಸ್ಥೆಯ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return)ಪ್ರಯಾಣಕ್ಕೆ ಶೇ.10 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.
- ಸಾರ್ವಜನಿಕ ಪ್ರಯಾಣಿಕರನ್ನು ಸಂಸ್ಥೆ ವಾಹನಗಳತ್ತ ಆಕರ್ಷಿಸಲು ಸಂಸ್ಥೆಯ ಪ್ರಮುಖ 67 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
- ಸಂಸ್ಥೆಯ ಸಾರಿಗೇತರ ಆದಾಯ (ವಾಣಿಜ್ಯ ಆದಾಯ) ಹೆಚ್ಚಿಸಲು, ವಿಶಾಲವಾದ ಖಾಲಿ ನಿವೇಶನ/ಸ್ಥಳ (ಹಳೆಯ ಕಟ್ಟಡಗಳನ್ನೊಳಗೊಂಡಂತೆ) ಗಳನ್ನು ಪರವಾನಿಗೆ ನೀಡಿ ವಾಣಿಜ್ಯ ಆದಾಯ ಹೆಚ್ಚಿಸಲು ಕ್ರಮವಹಿಸಲಾಗಿದೆ.
- ವಿಶಾಲವಾದ ಖಾಲಿ ನಿವೇಶನ/ಸ್ಥಳಗಳಲ್ಲಿ ಇಂಧನ ಘಟಕಗಳನ್ನು ಆರಂಭಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಬಾಡಿಗೆ ಆಧಾರದ ಮೇಲೆ 02 ಸ್ಥಳಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲಾಗಿದೆ.
- ಬಸ್ ನಿಲ್ದಾಣಗಳಲ್ಲಿ ಹಾಗೂ ಬಸ್ಸುಗಳ ಮೇಲೆ ಜಾಹೀರಾತು ಪ್ರದರ್ಶಿಸುವ ಮೂಲಕ ಆದಾಯ ಹೆಚ್ಚಳಕ್ಕೆ ಕ್ರಮ ವಹಿಸಲಾಗಿದೆ.
- ಖಾಲಿಯಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಪ್ರಕ್ರಿಯೆ ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ.

(signature)
ಮುಖ್ಯ ಸಂಚಾರ ವ್ಯವಸ್ಥಾಪಕರು

## ವಾಕರಸಾಸಂಸ್ಥೆಯ ಆರ್ಥಿಕ ನಷ್ಟ ಕಡಿಮೆ ಮಾಡಲು ಕೈಗೊಂಡ ಕ್ರಮಗಳ ವಿವರಗಳು

- ಸಂಸ್ಥೆಗೆ ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ದಿನಾಂಕ: 04/05.01.2025 ರಿಂದ ಜಾರಿಗೆ ಬರುವಂತೆ ಪ್ರಯಾಣದರ ಪರಿಷ್ಕರಣೆ ಮಾಡಲಾಗಿದೆ.
- ವಾಕರಸಾಸಂಸ್ಥೆಯಿಂದ ಸಾಮಾನ್ಯ, ನಗರ/ಉಪನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ರಾಜಹಂಸ, ವೋಲ್ವೋ ಮಲ್ಟಿ ಆಕ್ಸೆಲ್, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಅಂಬಾರಿ ಉತ್ಸವ, ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಟಿಕೇಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine) ಜಾರಿಗೆ ತಂದಿರುತ್ತದೆ. ಇ.ಟಿ.ಎಂ. ಯಂತ್ರಗಳಿಂದ ವಿತರಿಸುವ ಟಿಕೇಟುಗಳಿಗೆ UPI ಮೂಲಕ ಹಣ ಪಾವತಿಸುವ ವ್ಯವಸ್ಥೆ ಕಲ್ಪಿಸಲಾಗಿದೆ.
- ಸಂಸ್ಥೆಯ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return)ಪ್ರಯಾಣಕ್ಕೆ ಶೇ.10 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.
- ಸಾರ್ವಜನಿಕ ಪ್ರಯಾಣಿಕರನ್ನು ಸಂಸ್ಥೆ ವಾಹನಗಳತ್ತ ಆಕರ್ಷಿಸಲು ಸಂಸ್ಥೆಯ ಪ್ರಮುಖ 67 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
- ಸಂಸ್ಥೆಯ ಸಾರಿಗೇತರ ಆದಾಯ (ವಾಣಿಜ್ಯ ಆದಾಯ) ಹೆಚ್ಚಿಸಲು, ವಿಶಾಲವಾದ ಖಾಲಿ ನಿವೇಶನ/ಸ್ಥಳ (ಹಳೆಯ ಕಟ್ಟಡಗಳನ್ನೊಳಗೊಂಡಂತೆ) ಗಳನ್ನು ಪರವಾನಿಗೆ ನೀಡಿ ವಾಣಿಜ್ಯ ಆದಾಯ ಹೆಚ್ಚಿಸಲು ಕ್ರಮವಹಿಸಲಾಗಿದೆ.
- ವಿಶಾಲವಾದ ಖಾಲಿ ನಿವೇಶನ/ಸ್ಥಳಗಳಲ್ಲಿ ಇಂಧನ ಘಟಕಗಳನ್ನು ಆರಂಭಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಬಾಡಿಗೆ ಆಧಾರದ ಮೇಲೆ 02 ಸ್ಥಳಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲಾಗಿದೆ.
- ಬಸ್ ನಿಲ್ದಾಣಗಳಲ್ಲಿ ಹಾಗೂ ಬಸ್ಸುಗಳ ಮೇಲೆ ಜಾಹೀರಾತು ಪ್ರದರ್ಶಿಸುವ ಮೂಲಕ ಆದಾಯ ಹೆಚ್ಚಳಕ್ಕೆ ಕ್ರಮ ವಹಿಸಲಾಗಿದೆ.
- ಖಾಲಿಯಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಪ್ರಕ್ರಿಯೆ ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು

**<u>ನಿಗಮವನ್ನು ಲಾಭದಾಯಕವನ್ನಾಗಿ ಮಾಡಲು ಸಂಚಾರ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ</u> ವಿವರ ಕೆಳಕಂಡಂತಿದೆ.**

- ಘಟಕ/ವಿಭಾಗಗಳ ಮಟ್ಟದಲ್ಲಿ ದಿನಂಪ್ರತಿ ಅನುಸೂಚಿವಾರು ಆದಾಯವನ್ನು ಪರಿಶೀಲಿಸಿ, ಕಡಿಮೆ ಆದಾಯ ಬರುವ/ಹೆಚ್ಚಿಗೆ ನಷ್ಟ ಉಂಟು ಮಾಡುವ ಅನುಸೂಚಿಗಳನ್ನು ಪರಿಷ್ಕರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಡಬಲ್ ಕ್ರ್ಯೂ ಅನುಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ.
- ನಿಗಮದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕಾರ್ಯಾಚರಣೆಯಲ್ಲಿರುವ ಜೀಪ್, ಕ್ರೂಜರ್ ಮುಂತಾದ ಖಾಸಗಿ ವಾಹನಗಳ ಕಾರ್ಯಾಚರಣೆ ನಿಯಂತ್ರಿಸಲು ಕ್ರಮ ಜರುಗಿಸುವಂತೆ ಕಾಲಕಾಲಕ್ಕೆ ಸಾರಿಗೆ ಆಯುಕ್ತರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕೋರಲಾಗುತ್ತಿದೆ.
- ಖಾಸಗಿ ವಾಹನಗಳ ಪೈಪೋಟಿ ಇರುವ ಮಾರ್ಗಗಳಲ್ಲಿ ಪ್ರೋತ್ಸಾಹದಾಯಕ ಪ್ರಯಾಣದರಗಳನ್ನು ಜಾರಿಗೊಳಿಸಿ ಪ್ರಯಾಣಿಕರನ್ನು ನಿಗಮದ ಸಾರಿಗೆಗಳತ್ತ ಆಕರ್ಷಿಸಲು ಕ್ರಮವಹಿಸಲಾಗುತ್ತಿದೆ.
- ಉತ್ತಮ ಆದಾಯ ಬರುವ ಮಾರ್ಗಗಳಲ್ಲಿ ಹೊಸ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಕೆಲವು ಆಯ್ದ ಪ್ರಮುಖ ಮಾರ್ಗಗಳಲ್ಲಿ ಎಸಿ ಸ್ಲೀಪರ್ ಹಾಗೂ ನಾನ್ ಎಸಿ ಸ್ಲೀಪರ್ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಸಾರಿಗೆ ಆದಾಯ ಸೋರಿಕೆಯಾಗದಂತೆ ಮಾರ್ಗ ತನಿಖಾ ಕಾರ್ಯವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಲಾಗುತ್ತಿದೆ.
- ಅನುಸೂಚಿಗಳಿಗೆ ಆದಾಯದ ಗುರಿಯನ್ನು ನಿಗದಿಪಡಿಸಿ, ಅದರಂತೆ ಆದಾಯವನ್ನು ಸಂದಾಯವಾಗುವಂತೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಿ ಆದಾಯ ಹೆಚ್ಚಿಸಲು ಕ್ರಮ ಜರುಗಿಸಲಾಗುತ್ತಿದೆ.
- ವಿಭಾಗ ಮಟ್ಟದಲ್ಲಿ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆ ಕುರಿತಂತೆ ಶಾಖಾ ಮುಖ್ಯಸ್ಥರು ಹಾಗೂ ಘಟಕ ವ್ಯವಸ್ಥಾಪಕರನ್ನೊಳಗೊಂಡಂತೆ ವಾರಾಂತ್ಯ ಮತ್ತು ಮಾಸಾಂತ್ಯ ಸಭೆ ನಡೆಸಿ, ಸಾರಿಗೆ ಆದಾಯ ಉತ್ತಮ ಪಡಿಸಲು ಸಲಹೆಗಳನ್ನು/ನಿರ್ದೇಶನಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- ವಿಭಾಗಗಳ ಅಧಿಕಾರಿಗಳು ಮೇಲಿಂದ ಮೇಲೆ ಘಟಕಗಳಿಗೆ ಭೇಟಿ ನೀಡಿ, ಕಡಿಮೆ ಆದಾಯ ಬರುವ ಅನುಸೂಚಿಗಳನ್ನು ಪರಿಶೀಲಿಸಿ, ಸದರಿ ಅನುಸೂಚಿಗಳ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಖಾಲಿ ಇರುವ ಮಳಿಗೆಗಳಿಗೆ ಟೆಂಡರ್ ಪ್ರಕ್ರಿಯೆ ಸರಳೀಕರಣಗೊಳಿಸಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಜಾಹೀರಾತು ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಶಾಲಾ-ಕಾಲೇಜು ಮತ್ತು ಕಾರ್ಖಾನೆಗಳ ಮುಖ್ಯಸ್ಥರಿಗೆ ಪತ್ರ ಬರೆದು ಚಾರ್ಟರ್ಡ್ ಸರ್ವಿಸ್ ಪಡೆದುಕೊಳ್ಳಲು ಕ್ರಮ ಜರುಗಿಸಲಾಗಿರುತ್ತದೆ.
- ನಿಗಮದ ತೆರೆದ ನಿವೇಶನಗಳಲ್ಲಿ ಬಾಡಿಗೆ ಆಧಾರದ ಮೇಲೆ ಇಂಧನ ಬಂಕ್ ಅಳವಡಿಸಿ ವಾಣಿಜ್ಯ ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ತನಿಖಾ ತಂಡಗಳನ್ನು ನಿಯೋಜಿಸಿ ಪ್ರಯಾಣಿಕರು ಟಿಕೆಟ್ ಪಡೆದಿರುವ ಬಗ್ಗೆ ನಿಯಮಿತವಾಗಿ ತನಿಖೆ ನಡೆಸುವ ಮೂಲಕ ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿ, ಟಿಕೆಟ್ ಪಡೆದುಕೊಂಡು ಪ್ರಯಾಣಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಕೇಂದ್ರ ಕಛೇರಿಯ ಮಟ್ಟದಲ್ಲಿ ವಿಭಾಗಗಳ ಕಾರ್ಯಾಚರಣೆಯ ಅಂಕಿ-ಅಂಶಗಳನ್ನು ಪರಿಶೀಲಿಸಿ, ಆದಾಯ ಹೆಚ್ಚಿಸಲು ವಿಭಾಗಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಸಮಾನಾಂತರ ಕಾರ್ಯಾಚರಣೆಯನ್ನು ಅಭ್ಯಸಿಸಿ, ಅನುಸೂಚಿಗಳನ್ನು ಪರಿಷ್ಕರಿಸಲು ಆಯಾ ವಿಭಾಗದವರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.
- ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಮುಂಗಡ ಟಿಕೆಟ್ ಪಡೆದು ಪ್ರಯಾಣಿಸಲು ಅನುಕೂಲವಾಗುವ ದೃಷ್ಟಿಯಿಂದ ಹೆಚ್ಚಿನ ಸಂಖ್ಯೆಯ ಫ್ರಾಂಚೈಸಿಗಳನ್ನು ನೇಮಿಸಿ, ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಕೇಂದ್ರ ಕಛೇರಿ ಮಟ್ಟದಲ್ಲಿ ನಡೆಯುವ ಇಲಾಖಾ ಮುಖ್ಯಸ್ಥರ/ವಿಭಾಗೀಯ ನಿಯಂತ್ರಣಾಧಿಕಾರಿಗಳ/ವಿಭಾಗೀಯ ಸಂಚಾರ ಅಧಿಕಾರಿಗಳ ಸಭೆಯನ್ನು ಕಾಲಕಾಲಕ್ಕೆ ನಿಗದಿ ಮಾಡಿ ಅನುಸೂಚಿಗಳ ಬಗ್ಗೆ ವಿಶ್ಲೇಷಣೆ ಮಾಡಿ ಇತ್ಯಾದಿಗಳ ಬಗ್ಗೆ ಪರಿಶೀಲಿಸಿ, ಅಗತ್ಯ ಸುಧಾರಣಾ ಕ್ರಮ ಕೈಗೊಳ್ಳುವಂತೆ ವಿಭಾಗೀಯ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಿ, ಸಾರಿಗೆ ಆದಾಯ ಹೆಚ್ಚಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.
- ವಿವಿಧ ಸಾಮಾಜಿಕ ಹೊಣೆಗಾರಿಕೆಯಡಿ ನೀಡುತ್ತಿರುವ ಸೇವೆಯಿಂದ ಉಂಟಾಗುತ್ತಿರುವ ವೆಚ್ಚ ಪೈಕಿ ಸರ್ಕಾರದ ಪಾಲಿನ ಮೊತ್ತವನ್ನು ನಿಗಮಕ್ಕೆ ಮಂಜೂರು ಮಾಡುವಂತೆ ಸರ್ಕಾರಕ್ಕೆ ಕೋರಲಾಗಿದೆ.

*****



ಮುಖ್ಯ ಸಂಚಾರ ವ್ಯವಸ್ಥಾಪಕರು,
ಕ.ಕ.ರ.ಸಾ.ನಿ. ಕೇ.ಕ., ಕಲಬುರಗಿ

Scanned with OKEN Scanner

ಸಾರಿಗೆ ನಿಗಮಗಳ ಆರ್ಥಿಕ ನಷ್ಟ ಕಡಿಮೆ ಮಾಡಲು ಸರ್ಕಾರ ಯಾವುದೇ ವಿಶೇಷ ಪುನರುಜ್ಜೀವನ ಯೋಜನೆ ಅಥವಾ " Financial Restructuring Program " ರೂಪಿಸಿರುವುದೇ ಸಾರಿಗೆ ನಿಗಮಗಳ ಆರ್ಥಿಕ ನಷ್ಟ ಕಡಿಮೆ ಮಾಡಲು ಸರ್ಕಾರ ಯಾವುದೇ ವಿಶೇಷ ಪುನರುಜ್ಜೀವನ ಯೋಜನೆ ಅಥವಾ " Financial Restructuring Program " ರೂಪಿಸಿರುವುದೇ;

**ಬೆಂ.ಮ.ಸಾ.ಸಂಸ್ಥೆಯ ಆರ್ಥಿಕ ನಷ್ಟ ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳು :**

- ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸಿ, ಸಾರಿಗೆ ಸೇವೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.
- ಸಂಚಾರ ದಟ್ಟಣೆ ಸಮಯದಲ್ಲಿ ಹೆಚ್ಚು ಸುತ್ತುವಳಿಗಳನ್ನು ಅಳವಡಿಸಿ ಹಾಗೂ ಸಂಚಾರ ದಟ್ಟಣೆಯಿಲ್ಲದ ಸಮಯಗಳಲ್ಲಿ ಸುತ್ತುವಳಿಗಳನ್ನು ಕಡಿತಗೊಳಿಸಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.
- ಆಗಿಂದಾಗ್ಗೆ, ಪ್ರಯಾಣಿಕರ ಬೇಡಿಕೆ ಮತ್ತು ಅವಶ್ಯಕತೆಗನುಗುಣವಾಗಿ ಅನುಸೂಚಿಗಳ ಪರಿಷ್ಕರಣೆ/ವಿಸ್ತರಣೆ/ರದ್ದತಿಗೊಳಿಸಲಾಗುತ್ತಿದೆ.
- ಮೆಟ್ರೋ ರೈಲು ಪ್ರಯಾಣಿಕರಿಗೆ ಮೆಟ್ರೋ ರೈಲು ನಿಲ್ದಾಣದಿಂದ ವಾಸಸ್ಥಳಗಳಿಗೆ ತಲುಪಲು (first and last mile connectivity) ಮೆಟ್ರೋ ಫೀಡರ್ ಸೇವೆಗಳನ್ನು ಒದಗಿಸಲಾಗುತ್ತಿದೆ.
- ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ಮಾಸಿಕ, ದಿನದ ಹಾಗೂ ವಾರದ ಪಾಸುಗಳನ್ನು ವಿತರಿಸಲಾಗುತ್ತಿದೆ.

**ಮುಖ್ಯ ಸಂಚಾರ ವ್ಯವಸ್ಥಾಪಕರು (ಆ)**
**ಬೆಂ.ಮ.ಸಾ.ಸಂಸ್ಥೆ**